**ಎಮ್ ವಿ ಸಿ ನಂಃ 1176/2024**
**ಆರ್.ಡಬ್ಲ್ಯೂಃ 1,**

**ಸಾಕ್ಷಿಯನ್ನು ದಿನಾಂಕ : 23-01-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ :- ಶ್ರೀ. ಎ.ಎಮ್. ವಾಯ. ಎದುರುದಾರ ಪರ ವಕೀಲರಿಂದ:**

ಸಾಕ್ಷಿದಾರನು ತನ್ನ ಸಾಕ್ಷಿ ಪ್ರಮಾಣ ಪತ್ರ ಹಾಜರುಪಡಿಸಿದ್ದು ಹಾಗೂ ಅದರಲ್ಲಿ ಇರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ನಿಜ ಇರುತ್ತವೆ.

ಸಾಕ್ಷಿಯು ಈ ದಿನ ಹಾಜರು ಪಡಿಸಿರುವ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.

ನಿಆರ್. -1- ಪಾಲಸಿ ಕಾಫಿ ನಕಲು

**ಪಾಟಿ ಸವಾಲು: ಶ್ರೀ. ವಿ.ಎಸ್. ಆರ್. ಅರ್ಜಿದಾರ ಪರ ವಕೀಲರಿಂದ :**

ನಾನು ಅಂತಿಮ ವರದಿ ಪ್ರಕಾರ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಅಂತಿಮ ವರದಿ ಪ್ರಕಾರ ವಿಮೆ ಹೊಂದಿದ ಕೆ.ಎ.-32-ಎಎ-9559 ಮೇಲೆ ಅಂತಿಮ ವರದಿ ಸಲ್ಲಿಸಲಾಗಿದೆ ಎಂದರೆ ಸರಿ ಸಾಕ್ಷಿ ಮುಂದುವರೆದು ಸುಳ್ಳು ಎಂದು ನುಡಿಯುತ್ತಾರೆ. ಕೆ.ಎ.-32-ಎಎ-9559 ಅಪಘಾತ ಪಡಿಸಿದ ಈ ವಾಹನ ನಮ್ಮ ವಿಮೆಯ ಷರತ್ತುಗಳನ್ನು ಉಲ್ಲಂಘಿಸಿಲ್ಲಾ ಎಂದರೆ ಸರಿಯಲ್ಲ. ಅಪಘಾತ ಆದ ನಂತರ ಅಪಘಾತ ಪಡಿಸಿದ ವಾಹನಮಾಲಿಕ ನಮಗೆ ತಿಳಿಸಿಲ್ಲಾ ಅಂತಾ ಒಂದೇ ಕಾರಣಕ್ಕೆ ನಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ವಾಹನ ಮಾಲಿಕ ನಮ್ಮ ಕಂಪನಿಗೆ ಬೇಕಾದ ಎಲ್ಲಾ ದಾಖಲೆಗಳನ್ನು ಕೊಟ್ಟಿದ್ದರು ಅವುಗಳನ್ನು ಮುಚ್ಚಿಟ್ಟು ಸುಳ್ಳು ಸಾಕ್ಷಿ

ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

ನಿಪಿ-5 ರ ಪ್ರಕಾರ ಅಪಘಾತವು ರಸ್ತೆಯ ಬದಿಯಲ್ಲಿ ಆಗಿರುತ್ತದೆ ನಾನು ಮಧ್ಯದಲ್ಲಿ ಆಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪೋಲಿಸರು ಸರಿಯಾಗಿ ತನಿಕೆ ಅಂತಿಮ ವರದಿ ಸಲ್ಲಸಿದ್ದಾರೆ ಎಂದರೆ ಸರಿಯಲ್ಲ. ಕಲಂ 134(ಸಿ)ಮೋ. ಕಾ. ಉಲ್ಲಂಘನೆ ಆಗಿದೆ ಎಂದು ಜವಾಬ್ದಾರಿ ತಪ್ಪಿಸಿಕೊಳ್ಳು ಸಾಧ್ಯವಿಲ್ಲಾ ಎಂದರೆ ಸರಿಯಲ್ಲ. ಮೃತ ವ್ಯಕ್ತಿ ಮಠಾಧೀಶ ಇದ್ದ ಕಾರಣ ಅವರಿಗೆ ಯಾರು ಅವಲಂಬಿತರು ಇಲ್ಲಾ ಎಂದರೆ ಸರಿಯಲ್ಲ . ಮೃತ ವ್ಯಕ್ತಿ ಶಾಲೆ ನಡೆಸುತ್ತಿದ್ದರು, ತಂದೆ ತಾಯಿ ನೋಡಿಕೊಳ್ಳುತ್ತಿದ್ದರು ಮತ್ತು ಒಕ್ಕಲುತನ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನಗೆ ಮಠಾಧೀಶರ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲಾ ಎಂದರೆ ಸರಿಯಲ್ಲ. ನಾನು ಮಠಾಧೀಶರ ಬಗ್ಗೆ ಸರಿಯಾಗಿ ತಿಳಿದುಕೊಳ್ಳದೇ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ಅಂತಿಮ ವರದಿಯಲ್ಲಿ ಚಾಲನಾ ಪತ್ರ ಉಲ್ಲಂಘನೆ ಆದ ಬಗ್ಗೆ ಎಲ್ಲಿಯೂ ತಿಳಿಸಿಲ್ಲಾ ಎಂದರೆ ಸರಿಯಲ್ಲ. ಮೊದಲು ಯಾವ ಪರಿಹಾರ ಅರ್ಜಿ ಸಲ್ಲಿಸಿದ್ದಾರೆ ಎಂದು ಗೊತ್ತಿಲ್ಲಾ. ಈ ಪ್ರಕರಣದಲ್ಲಿ ಮೃತ ವ್ಯಕ್ತಿ ತಂದೆ ತಾಯಿ ಬಂದು ಸಾಕ್ಷಿ ನುಡಿದಿದ್ದಾರೆ ಎಂದರೆ ಗೊತ್ತಿಲ್ಲಾ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಪ್ಯಾರಾ ನಂ-3 ರಿಂದ 6 ರಲ್ಲಿ ತಿಳಿಸಿದ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ನಾವು ಖಾಸಗಿ ತನಿಖೆ ಮಾಡಿಲ್ಲಾ. ಅಂತಿಮ ವರದಿ ಪ್ರಕಾರ ಅರ್ಜಿದಾರರ ವಾಹನಕ್ಕೆ ಕೆ.ಎ.-32-ಎಎ-9559 ಮೇಲೆ ಸಲ್ಲಿಸಿದ್ದಾರೆ ಸರಿ. ಇದು ಥರ್ಡ ಪಾರ್ಟಿ ಕ್ಲೇಮ್ ಇದೆ ಎಂದರೆ ಸರಿ. ಅಪಘಾತ ಪಡಿಸಿದ

**ಎಮ್ ವಿ ಸಿ ನಂಃ 1176/2024**
ಆರ್.ಡಬ್ಲ್ಯೂಃ 1,

ವಾಹನಕ್ಕೆ ಚಾಲನಾ ಪತ್ರ ಮತ್ತು ವಿಮೆ ಇದೆ ಮತ್ತು ಎಲ್ಲಾ ದಾಖಲೆ ಇವೆ ಎಂದರೆ ಸರಿಯಲ್ಲ. ಪರಿಹಾರ ನೀಡಲು ನಾವು ಭಾಧ್ಯಸ್ಥರು ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
ಚಿತ್ತಾಪೂರ